**ಕರ್ನಾಟಕ ಸರ್ಕಾರ**
**ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 06 ಜಿಆರ್‌ಟಿ(2) 2022

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001,
ದಿನಾಂಕ:09.12.2022.

**ಸುತ್ತೋಲೆ**

ವಿಷಯ: 44 ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಮಾಹೆಯಾನ ಸಹಾಯಾನುದಾನ (ವೇತನ) ಬಿಡುಗಡೆ ಬಗ್ಗೆ.

-*-*-*-*-*-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 44 ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಪ್ರತಿ ತಿಂಗಳ ಸಹಾಯಾನುದಾನ ವೇತನ ಬಿಲ್ಲುಗಳನ್ನು ಆಯಾ ತಿಂಗಳಿನ 26ನೇ ದಿನಾಂಕದೊಳಗಾಗಿ (30 ದಿನದ ಹಾಜರಾತಿಯಂತೆ) ತಪ್ಪದೇ ಸಂಬಂಧಪಟ್ಟ ಪ್ರಾಂಶುಪಾಲರು ಹೆಚ್.ಆರ್.ಎಂ.ಎಸ್ ನಲ್ಲಿ ಸೃಜಿಸುವುದು. ಈ ಕಛೇರಿಯಲ್ಲಿ 26ನೇ ದಿನಾಂಕದೊಳಗಾಗಿ ಸ್ವೀಕೃತಗೊಂಡ ಬಿಲ್ಲುಗಳನ್ನು ಮಾತ್ರ ಸಹಾಯಾನುದಾನ (ವೇತನ) ಬಿಡುಗಡೆ ಮಾಡಲು ಪರಿಗಣಿಸಲಾಗುವುದು. ತಪ್ಪಿದಲ್ಲಿ ಆಯಾ ತಿಂಗಳ ವೇತನ ಬಿಲ್ಲನ್ನು ಅದರ ಮುಂದಿನ ತಿಂಗಳ ಸಹಾಯಾನುದಾನ (ವೇತನ) ಬಿಡುಗಡೆ ಸಮಯದಲ್ಲಿ ಪರಿಗಣಿಸಲಾಗುವುದು. ಮುಂದುವರೆದು ಸಹಾಯಾನುದಾನ (ವೇತನ) ಬಿಡುಗಡೆ ವಿಳಂಬವಾದಲ್ಲಿ ಸಂಸ್ಥೆಯ ಪ್ರಾಚಾರ್ಯರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

ಕರಡು ಪತ್ರ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

9/12/22.

ಜಂಟಿ ನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

1. ಇಲಾಖೆಯ ವ್ಯಾಪ್ತಿಪಡುವ 44 ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ
2. ನೋಡಲ್ ಅಧಿಕಾರಿ, ಹೆಚ್.ಆರ್.ಎಂ.ಎಸ್ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

ಪ್ರತಿ ಮಾಹಿತಿಗಾಗಿ:

1. ಆಯುಕ್ತರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,
2. ನಿರ್ದೇಶಕರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,
3. ಜಂಟಿ ನಿರ್ದೇಶಕರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,
4. ಆಡಳಿತಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,